**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>**
**<u>ಅಫಜಲಪೂರ</u>**

ಸಿಸಿ ನಂ.22/2018

ಚಾಸಾ-8 ಪ್ರಾಸಾ-9

ಸತ್ಯ ಪ್ರತಿಜ್ಞೆಯ ಮೇರೆಗೆ
ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು
ದಿನಾಂಕ: 05.04.2021

| | | |
|---|---|---|
| ಹೆಸರು | ಃ | ಸಿದ್ರಾಮಯ್ಯ ಹಿರೇಮಠ |
| ತಂದೆ ಹೆಸರು | ಃ | ಪಡದಯ್ಯ |
| ವಯಸ್ಸು | ಃ | 31-ವರ್ಷ |
| ಉದ್ಯೋಗ | ಃ | ಗ್ರಾಮ ಲೆಕ್ಕಿಗ |
| ವಾಸಸ್ಥಳ | ಃ | ನಿಂಬರ್ಗಾ |

ಮುಖ್ಯ ವಿಚಾರಣೆಃ ಎಪಿಪಿ ಯವರಿಂದ

2013 ರಿಂದ ಡಿಸೆಂಬರ್-2016 ರವರೆಗೆ ತಹಶೀಲ್ ಕಚೇರಿಯಲ್ಲಿ ಗ್ರಾಮ ಲೆಕ್ಕಿಗ ಎಂದು ಸೇವೆ ಸಲ್ಲಿಸಿದ್ದೇನೆ. ಚಾಸಾ-1, 4, ನನ್ನ ಮೇಲಾಧಿಕಾರಿ. ಆರೋಪತರನ್ನು ನೋಡಿರುತ್ತೇನೆ. ದಿನಾಂಕ 25.08.2016 ರಂದು ಬನ್ನೆಟ್ಟಿ ಗ್ರಾಮದ 11 ಸರ್ವೆ ನಂಬರಗಳಿಗೆ ಭೇಟಿ ನೀಡಿ ಅಕ್ರಮವಾಗಿ ಸಂಗ್ರಹಿಸಿದ ಮರಳನ್ನು ಜಪ್ತಿ ಮಾಡಿ ಪ್ರಕರಣ ದಾಖಲಿಸಲಾಗಿತ್ತು. ದಿನಾಂಕ 02.12.2016 ರಂದು ಡಿಸಿ ರವರ ಆದೇಶದ ಮೇರೆಗೆ ನಾನು, ಇತರ ಸಿಬ್ಬಂದಿಗಳು ಪೋಲಿಸ ಸಿಬ್ಬಂದಿ ಸೇರಿ ಬನ್ನೆಟ್ಟಿ ಗ್ರಾಮದ ಜಮೀನುಗಳಲ್ಲಿ 11 ಸರ್ವೆ ನಂಬರಗಳಿಗೆ ಭೇಟಿ ನೀಡಲಾಗಿ ಅಲ್ಲಿ ಸಂಗ್ರಹಿಸಿದ್ದ 6800 ಘನ ಮೀಟರ್ ಮರಳು ಇರಲಿಲ್ಲ. ಸದರಿ ಮರಳು ಯಾರೊ ಕಳ್ಳತನ ಮಾಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿದ್ದು, ಅಭಿಯೋಜನೆ ಪರ ಇರುವ ಕಾಗದ ಪತ್ರಗಳನ್ನು ಪರಿಶೀಲಿಸಿ ಪಾಟಿ ಸವಾಲಿಗೆ ಅನುಮತಿಸಲಾಯಿತು.)

ಪಾಟಿ ಸವಾಲುಃ ಎಪಿಪಿ ಯವರಿಂದ

ದಿನಾಂಕ 02.12.2016 ರಂದು ನಾನು, ಚಾಸಾ-1 ರಿಂದ 5, 7 ರಿಂದ 18 ರವರು ಸೇರಿ ಜಿಲ್ಲಾಧಿಕಾರಿಗಳ ಆದೇಶದಂತೆ ಪೋಲಿಸರ ಸಹಯೋಗದೊಂದಿಗೆ ಬನ್ನೆಟ್ಟಿ ಗ್ರಾಮದಲ್ಲಿ ಅಕ್ರಮವಾಗಿ ಮರಳು ಸಂಗ್ರಹಣೆ ಮಾಡಿದ ಬಾತ್ಮಿ ಮೇರೆಗೆ ಆರೋತರ ಸರ್ವೆ ನಂ.1/2, 1/3, 4/1/1, 4/1/7, 4/2/2, 5/4, 27/2, 31/6, 32/1, 34/1/3, 30/1 ಗಳಿಗೆ ಭೇಟಿ ನೀಡಿ ಅಲ್ಲಿ ಅಕ್ರಮವಾಗಿ ಸಂಗ್ರಹಿಸಿದ ಒಟ್ಟು 6678.35 ಘ.ಮಿ. ಮರಳು ಅಂದಾಜು ಕಿಮ್ಮತ್ತು ರೂ.43,40,927/- ಇದ್ದು ಅಕ್ರಮವಾಗಿ ಸಂಗ್ರಹಿಸಿದ ಮರಳನ್ನು ಆರೋಪಿತರು ಕಳ್ಳತನ ಮಾಡಿದ ಬಗ್ಗೆ ಚಾಸಾ-1 ದೂರು ನೀಡಿದ್ದು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ

ಘಟನಾ ಸ್ಥಳಕ್ಕೆ ಹೋದ ದಿನಾಂಕ ಡಿಸೆಂಬರ್ 2 ಅಥವಾ 6 ಇರಬಹುದು. ನಾವು ಭೇಟಿ ನೀಡಿದಾಗ ಯಾವ ಜಮೀನಿನಲ್ಲಿ ಎಷ್ಟು ಮರಳು ಇತ್ತು ಎಂದು ಹೇಳಲಾಗುವುದಿಲ್ಲ. ಘಟನಾ ಸ್ಥಳ ಭಾವಚಿತ್ರ ತೆಗೆದಿಲ್ಲ. ಸದರಿ ಸರ್ವೆ ನಂಬರಗಳ ಆಯಾ ಮಾಲಿಕರೆ ಉಳುಮೆ ಮಾಡುತ್ತಾರೆ. ಉಳುಮೆ ಮಾಡಲು ಬೇರೆಯವರಗೆ ಜಮೀನನ್ನು ನೀಡುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸದರಿ ಸರ್ವೆ ನಂಬರಗಳಲ್ಲಿ ಯಾರು ಸಾಗುವಳಿ

ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಹೇಳಿಕೆ ನೀಡಿದ ದಿನಾಂಕ ನೆನಪಿಲ್ಲ. ಘಟನಾ ಸ್ಥಳಕ್ಕೆ ಭೇಟಿ ನೀಡದೆ ಮತ್ತು ನನಗೆ ಯಾವುದೇ ಮಾಹಿತಿ ಇರದಿದ್ದರೂ ಸಹ ಮೇಲಾಧಿಕಾರಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ